**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಸುರಪುರ ಸಾಃ ಸುರಪುರ**

**ಸಿಸಿ ನಂ. 1819/2024**

1. ಭೀಮಣ್ಣ ತಂದೆ ಶೇಕಪ್ಪ

. . . . . . . ಫಿರ್ಯಾದುದಾರರು

**ವಿರುದ್ಧ**

1. ಲಕ್ಷ್ಮೀ ಗಂಡ ದೇವರಾಜ ಹಸನಾಪುರ

. . . . . . . ಆರೋಪಿತರು

= = = = =

**<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 251 ರಡಿಯಲ್ಲಿ ಆರೋಪಣಾ ಸಾರಾಂಶ</u>**

ಆರೋಪಿತನಾದ ನೀನು ದೂರುದಾರ ರವರ ಕಡೆಯಿಂದ ಕುಟುಂಬದ ಅಡಚಣೆಗೆ ಸಾಲಕ್ಕಾಗಿ ಒಟ್ಟು ರೂ.05,00,000/- ಗಳ ಸಾಲವನ್ನು ಪಡೆದಿದ್ದು, ಸದರಿ ಹಣ ಮರುಪಾವತಿ ಕುರಿತು ದೂರುದಾರರಿಗೆ ರೂ.05,00,000/- ಗಳ 621884 ರಂತೆ ಚೆಕ್ಕನ್ನು ದಿನಾಂಕ 13.08.2024 ರಂದು ನೀಡಿದ್ದು, ಸದರಿ ಚೆಕ್ಕುನ್ನು ನಗದೀಕರಣಕ್ಕಾಗಿ ದೂರುದಾರರು ತಮ್ಮ ಖಾತೆಯ ಮುಖಾಂತರ ದಿನಾಂಕ 16.08.2024 ರಂದೇ ಕೆನರಾ ಬ್ಯಾಂಕ್, ಶಹಾಪುರ ಶಾಖೆಯಲ್ಲಿ ಸಲ್ಲಿಸಿದ್ದು, ಸದರಿ ಚೆಕ್ಕು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎನ್ನುವ ಹಿಂಬರಹದೊಂದಿಗೆ ದಿನಾಂಕ 16.08.2024 ರಂದೇ ದೂರುದಾರರಿಗೆ ಮರಳಿ ನೀಡಿರುತ್ತಾರೆ. ದೂರುದಾರರು ಸದರಿ ಚೆಕ್ಕಿನ ಹಣ ನೀಡುವಂತೆ ಕೋರಿ ದಿನಾಂಕ 02.09.2024 ರಂದು ನಿಮಗೆ ನೊಂದಾಯಿತ ಅಂಚೆಯ ಮೂಲಕ ನೋಟಿಸನ್ನು ಕಳುಹಿಸಿದ್ದು ಸದರಿ ನೋಟಿಸು ನಿಮಗೆ ತಲುಪಿದ್ದರೂ ಸಹ ಇಲ್ಲಿಯವರೆಗೆ ದೂರುದಾರರಿಗೆ ನೀಡಬೇಕಾದ ಹಣವನ್ನು ನೀವು ನೀಡಿಲ್ಲ. ಆದ್ದರಿಂದ ನೀವು ಲಿಖಿತ ವರ್ಗಾವಣೆಗಳ ಕಾಯ್ದೆ ಕಲಂ.138 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆ ಅಡಿಯಲ್ಲಿ ಮಾಡಿದ್ದಿರಿ.

ಪ್ರಶ್ನೆ.1: ಮೇಲೆ ಹೇಳಿದ ಆಪಾದನೆ ತಿಳಿಯಿತೋ?

ಉತ್ತರ:

ಪ್ರಶ್ನೆ.2: ಸದರಿ ಅಪಾದನೆಯನ್ನು ಒಪ್ಪಿಕೊಳ್ಳುತ್ತೀರಾ ಅಥವಾ ಪ್ರತಿರಕ್ಷಣೆ ಮಾಡಿಕೊಳ್ಳುತ್ತೀರಾ?

ಉತ್ತರ:

(ಆಪಾದನೆಯನ್ನು ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಅವರ ಸಹಿ ಪಡೆಯಲಾಯಿತು)

ದಿನಾಂಕ : 20.09.2025
ಸ್ಥಳ : ಸುರಪುರ

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ. ನ್ಯಾಯಿಕ ದಂಡಾಧಿಕಾರಿಗಳು,
ಸುರಪುರ